

# ಒಂದು ಶಿಕಾರಿ, ಇಬ್ಬರು ಬೇಟೆಗಾರರು

**ಬಲಿಷ್ಠರಿಂದ ದುರ್ಬಲರ ಶೋಷಣೆ ಸಮಾಜದಲ್ಲಿ ನಡೆಯುತ್ತಲೇ ಬಂದಿದೆ. ಇಂಥ ದಬ್ಬಾಳಿಕೆ ಪಕ್ಷಿಲೋಕಕ್ಕೂ ಹೊರತಾದುದಲ್ಲ. ಸಣ್ಣ ಪಕ್ಷಿಯ ಬೇಟೆಯನ್ನು ದೊಡ್ಡ ಪಕ್ಷಿ ಲಪಟಾಯಿಸಿದ ಇಲ್ಲಿನ ಚಿತ್ರಪಟ ಕಥನ, ನಮ್ಮನ್ನೇ ನಮಗೆ ಕಾಣಿಸುವಂತಿದೆ.**

**■ ಶಿವು ಕೆ.**

ಬಿಳಿಗರುಡ ಬೇಟೆಯಾಡಿದ ಮೀನನ್ನು, ಅದಕ್ಕಿಂತ ದೊಡ್ಡದಾದ ಬಿಳಿ ಕೊಕ್ಕಿನ ಸಮುದ್ರಹದ್ದು (White billed sea eagle) ಕಿತ್ತುಕೊಂಡದ್ದನ್ನು ಕ್ಯಾಮೆರಾ ಕಣ್ಣುಗಳಿಂದ ನೋಡಿದಾಗ ಮನಸ್ಸಿನಲ್ಲಿ ಮೂಡಿದ್ದು: ಪಕ್ಷಿಲೋಕದಲ್ಲೂ ದುರ್ಬಲರ ಶೋಷಣೆ ಇದೆಯೇ ಎನ್ನುವ ಪ್ರಶ್ನೆ.

ಕುಂದಾಪುರದ ಪರಿಸರ. ನದಿಗಳು ಸಮುದ್ರ ಸೇರುವ ಸ್ಥಳ. ನಮ್ಮ ದೋಣಿ ನಿಧಾನವಾಗಿ ತೇಲುತ್ತಿತ್ತು. ಕೈಯೊಳಗಿನ ಕ್ಯಾಮೆರಾ ಕಣ್ಣು ಮಾತ್ರ ಜಾಗೃತವಾಗಿತ್ತು. ಅಲ್ಲಿ ಸಂಜೆಯ ವೇಳೆಗೆ ನೀರು ನಿಧಾನವಾಗಿ ಹೆಚ್ಚಾಗಿ ಮುಂಜಾನೆ ಹೊತ್ತಿಗೆ ನೀರಿನ ಮಟ್ಟ ಕುತ್ತಿಗೆಗೆ ಏರುತ್ತದೆ. ಮತ್ತೆ ಮಧ್ಯಾಹ್ನದ ಹೊತ್ತಿಗೆ ಇಳಿಮುಖವಾಗಿ, ಕುತ್ತಿಗೆಮಟ್ಟ ನೀರಿದ್ದ ಜಾಗವೆಲ್ಲ ನೆಲವಾಗಿ, ಬೆಳಿಗ್ಗೆ ಇಲ್ಲಿ ಅಷ್ಟೊಂದು ನೀರಿತ್ತಾ ಎಂದು ಆಶ್ಚರ್ಯಪಡುವಂತಾಗುತ್ತದೆ. ನೀರೆಲ್ಲಾ ಖಾಲಿಯಾಗಿ ಚಿಕ್ಕ ಚಿಕ್ಕ ಮೈದಾನಗಳಂತೆ ಅಲ್ಲಲ್ಲಿ ಪುಟ್ಟ ಪುಟ್ಟ ದ್ವೀಪಗಳು ಸೃಷ್ಟಿಯಾದಂತೆ ಭಾಸವಾಗುತ್ತದೆ. ಅದು ಪ್ರತಿನಿತ್ಯ ಸಂಭವಿಸುವ ಬೆರಗು.

ಸಂಜೆ ಮತ್ತು ರಾತ್ರಿಯ ಹೊತ್ತಿಗೆ ಆ ದ್ವೀಪಗಳೆಲ್ಲಾ ನೀರಿನಲ್ಲಿ ಮುಳುಗುತ್ತವೆ. ಮುಂಜಾನೆಯಿಂದ ಮಧ್ಯಾಹ್ನದ ಹೊತ್ತಿಗೆ ನೀರು ಖಾಲಿಯಾಗಿ ನಾವು ಕಬಡ್ಡಿ, ಕೆಲವೊಮ್ಮೆ ಫುಟ್‌ಬಾಲ್ ಆಡಬಹುದಾದ ಮೈದಾನಗಳ ಅಳತೆಗೆ ದ್ವೀಪಗಳು ರೂಪುಗೊಳ್ಳುತ್ತವೆ. ಅಂದು